# ಶ್ರಾವಣ ದರ್ಶನ : 23ನೇ ದಿನದ ಕಾರ್ಯಕ್ರಮ

**ಚಿತ್ರದುರ್ಗ ಆ. 12 :** ಅಂಗೈಯೊಳಗಿನ ರೇಖೆಗಳು ಒಬ್ಬ ವ್ಯಕ್ತಿಯ ಬದುಕನ್ನು ನಿರ್ಧರಿಸುವುದಿಲ್ಲ. ಇವು ಯಾವುದೇ ಭವಿಷ್ಯವನ್ನು ಸೃಷ್ಟಿಸುವುದಿಲ್ಲ. ಹಾಗಾಗಿ ಶರಣರು ಹೇಳುವುದು ರಟ್ಟೆಯಲ್ಲಿ ಶಕ್ತಿಯಿದೆ. ಇದು ಎಲ್ಲ ದರಿದ್ರತನವನ್ನು ನಿವಾರಿಸುತ್ತದೆ ಎಂದು ಡಾ. ಶಿವಮೂರ್ತಿ ಮುರುಘಾ ಶರಣರು ತಿಳಿಸಿದರು.

ಮುರುಘಾಮಠದಿಂದ ಬುಧವಾರ ನಡೆದ ಶ್ರಾವಣದರ್ಶನ 23ನೇ ದಿನದ ಫೇಸ್‌ಬುಕ್ ಮತ್ತು ಯುಟ್ಯೂಬ್ ಲೈವ್ ಕಾರ್ಯಕ್ರಮದಲ್ಲಿ ಜ್ಯೋತಿಷ್ಯ ಮತ್ತು ಕಾಲಜ್ಞಾನ ವಿಷಯ ಕುರಿತು ಚಿಂತನ ನೀಡಿದ ಶ್ರೀಗಳು,

ಬೇರೆ ಬೇರೆ ಶಾಸ್ತ್ರಗಳು ಇರುವಂತೆ ಜ್ಯೋತಿಷ್ಯವು ಒಂದು ಶಾಸ್ತ್ರ. ಇವೆಲ್ಲವು ಮಾನವ ನಿರ್ಮಿತ. ಮಾನವ ಲೆಕ್ಕಾಚಾರ ಮಾಡಿ ಗ್ರಹಗಳ ಚಲನೆ ನೋಡಿ ನಿರ್ಮಿಸಲಾಗಿದೆ. ಕೆಲವರು ಜ್ಯೋತಿಷ್ಯವನ್ನು ನಂಬುತ್ತಾರೆ. ಅದು ಅವರವರ ವಿವೇಕಕ್ಕೆ ಬಿಟ್ಟದ್ದು. ಜ್ಯೋತಿಷ್ಯದಲ್ಲಿ ಪ್ರಮುಖವಾಗಿ ಕೇಳಿಬರುವುದು ಗ್ರಹಗತಿ. ನಾವು ಗತಿ, ಮತಿ ಮತ್ತು ಸದ್ಗತಿಯ ಬಗ್ಗೆ ಮಾತನಾಡುತ್ತೇವೆ. ಯಾರು ಸುಮತಿಯ ಜೊತೆಯಲ್ಲಿ ಸಾಗುವರೊ ಅವರಿಗೆ ಸದ್ಗತಿ ಸಿಗುತ್ತದೆ. ಕೆಲವರು ಗ್ರಹಗತಿ ಅವಲಂಬಿಸಿ ಕುಳಿತಲ್ಲಿಯೇ ಕೂತಿರುತ್ತಾರೆ. ಜ್ಯೋತಿಷ್ಯ ಶಾಸ್ತ್ರದಲ್ಲಿ ಸಂಖ್ಯಾಶಾಸ್ತ್ರ ಇದೆ. ಸಂಖ್ಯಾಶಾಸ್ತ್ರ ಒಂದಷ್ಟು ಸುಳಿಹುಗಳನ್ನು ಕೊಡಬಹುದು. ಜನನ ಅನಿಶ್ಚಿತ; ಮರಣ ನಿಶ್ಚಿತ. ಸಾವು ಎನ್ನುವುದು ಮಾನವ ಜೀವನದಲ್ಲಿ ಮಾತ್ರವಲ್ಲ ಪ್ರತಿಜೀವಿಗೂ ಇರುತ್ತದೆ. ಹುಟ್ಟಿದ ಹೊಟ್ಟೆಯಲಿ ಸಾವಿನ ಗುಳಿಗೆ ತಿಂದು ಎಂದು ಕವಿಯೊಬ್ಬ ಹೇಳುತ್ತಾನೆ. ಅಂಗೈಯೊಳಗಿನ ರೇಖೆಗಳು ಒಬ್ಬ ವ್ಯಕ್ತಿಯ ಬದುಕನ್ನು ನಿರ್ಧರಿಸುವುದಿಲ್ಲ. ಇವು ಯಾವುದೇ ಭವಿಷ್ಯವನ್ನು ಸೃಷ್ಟಿಸುವುದಿಲ್ಲ. ಹಾಗಾಗಿ ಶರಣರು ಹೇಳುವುದು ರಟ್ಟೆಯಲ್ಲಿ ಶಕ್ತಿಯಿದೆ. ಇದು ಎಲ್ಲ ದರಿದ್ರತನವನ್ನು ನಿವಾರಿಸುತ್ತದೆ. ಅವರವರ ಕಲ್ಯಾಣ ಉದ್ಧಾರ ಅವರವರ ಕೈಯಲ್ಲಿದೆ.

ಅರ್ಥರೇಖೆಯಿದ್ದಲ್ಲಿ ಫಲವೇನು, ಆಯುಷ್ಯರೇಖೆ ಇಲ್ಲದ್ದನ್ನಕ್ಕರ?

ಹಂದೆಯ ಕೈಯಲ್ಲಿ ಚಂದ್ರಾಯುಧವಿದ್ದಲ್ಲಿ ಫಲವೇನು?

ಅಂಧಕನ ಕೈಯಲ್ಲಿ ದರ್ಪಣವಿದ್ದು ಫಲವೇನು?

ಮರ್ಕಟನ ಕೈಯಲ್ಲಿ ಮಾಣಿಕವಿದ್ದು ಫಲವೇನು?

ನಮ್ಮ ಕೂಡಲಸಂಗನ ಶರಣರನರಿಯದವರ ಕೈಯಲ್ಲಿ

ಲಿಂಗವಿದ್ದು ಫಲವೇನು? ಶಿವಪಥವನರಿಯದನ್ನಕ್ಕ.

ಕಾಲಜ್ಞಾನ : ಶರಣರನ್ನು ಅರಿಯಲು ಇರುವುದು ಅಂಗೈಯೊಳಗಿನ ಲಿಂಗ, ಅರಿಯದಿದ್ದರೆ ಆಗುವನು ಮಂಗ. ಶರಣರು, ಸೂಫಿ ಸಂತರು ಹೇಳಿದ ಕಾಲಜ್ಞಾನ ಬೇರೆ. ಅವರು ಪರಮಾರ್ಥ ಸಾಧನೆಯಿಂದ ಮುಂದೆ ಏನಾಗಬಹುದೆಂದು ಕಾಲಜ್ಞಾನ ರಚಿಸಿದರು. ಕಾಲಜ್ಞಾನ ದಂಧೆಯಲ್ಲ. ಶಿವಶರಣರು ಎಂದೂ ಸಹ ಕಾಲಜ್ಞಾನ ಹೇಳುತ್ತೇವೆಂದು ಕೂತವರಲ್ಲ. ತ್ರಿಕಾಲ ಜ್ಞಾನ ಎಂದರೆ ಭೂತ, ವರ್ತಮಾನ ಮತ್ತು ಭವಿಷ್ಯತ್ ಕಾಲ. ಈ ಮೂರರ ಬಗೆಗೆ ಅರಿತಿರುವವರು ತ್ರಿಕಾಲ ಜ್ಞಾನಿಗಳು. ಬಸವಣ್ಣ, ಪ್ರಭುದೇವರು, ಅಕ್ಕಮಹದೇವಿ, ಚೆನ್ನಬಸವಣ್ಣ, ಮೋಳಿಗೆ ಮಾರಯ್ಯ ಮೊದಲಾದವರು ತ್ರಿಕಾಲ ಜ್ಞಾನಿಗಳು. ಗವಿಗಳಲ್ಲಿ ಕುಳಿತುಕೊಂಡು ಅಂತರ್ಮುಖಿ ಸಾಧನೆ ಮಾಡುತ್ತಿದ್ದರು. ಅದನ್ನು ಬರೆದು ದಾಖಲೆ ಮಾಡಿದರು.